ಪ್ರತಿಬಿಂಬ
PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 145-149
©*IIMRD*, Mysuru

IIMRD JOURNALS
www.iimrd.com

# ಕೆರೆ ನಿರ್ವಹಣೆ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ನೀರಗಂಟಿ ಮನೆತನದ ಪಾತ್ರ

**ರಮ್ಯ ಎನ್.ಆರ್***
*ಸಂಶೋಧನಾ ವಿದ್ಯಾರ್ಥಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

***ಸಾರಾಂಶ (Abstract)***

*ಭಾರತೀಯ ಸಮಾಜದಲ್ಲಿ ಆಯಗಾರಿಕೆ ಎನ್ನುವುದು ಇತ್ತೀಚಿಗೆ ಬೆಳೆದು ಬಂದಿರುವ ವ್ಯವಸ್ಥೆಯಲ್ಲ. ಅದು ಪ್ರಾಚೀನ ಕೃಷಿ ಸಮಾಜದ ಒಂದು ಸಾಮಾಜಿಕ (ವ್ಯವಸ್ಥೆಯಾಗಿತ್ತು) ಪದ್ಧತಿಯಾಗಿತ್ತು ಇದು (ಅಂತರ್) ಇತರೆ ಕೌಟುಂಬಿಕ ಸಂಬಂಧಗಳ ಸಾಮೂಹಿಕ ಹೊಣೆಗಾರಿಕೆಯಾಗಿತ್ತು. ಕೃಷಿಯನ್ನು ಅವಲಂಬಿಸಿರುವ ರೈತ ಕುಟುಂಬಗಳು, ರೈತರನ್ನು ಆಶ್ರಯಿಸಿ ಬದುಕುವ ಕೈ ಕಸುಬಿನವರು ಕೈಕಸುಬಿನವರನ್ನು ಆಶ್ರಯಿಸಿ ಬದುಕುವ ರೈತ ಕುಟುಂಬಗಳು, ಕರ್ತವ್ಯಪ್ರಜ್ಞೆಗೆ ಅನುಗುಣವಾಗಿ ಆಯಪದ್ಧತಿ ಪ್ರಚಲಿತವಾಗಿದೆ ಇದೊಂದು ಧಾರ್ಮಿಕ ವ್ಯವಸ್ಥೆಯಾಗಿತ್ತು. ಗ್ರಾಮಗಳಲ್ಲಿ ಹನ್ನೆರಡು ಜನ ಆಯಗಾರರನ್ನು ಕಾಣುತ್ತೇವೆ. ಆಯಗಾರರಲ್ಲಿ ಗೌಡ, ಶಾನುಭೋಗ, ನೀರಗಂಟಿ, ತೋಟಿ, ತಳವಾರ, ಕಮ್ಮಾರ, ಚಮ್ಮಾರ, ಅಗಸ ಮುಂತಾದವುಗಳಾಗಿವೆ. ಈ ಸಂಶೋಧನಾ ಅಧ್ಯಯನದಲ್ಲಿ ಗ್ರಾಮಾಡಳಿತದಲ್ಲಿ ನೀರಗಂಟಿ ಮನೆತನದ ಪಾತ್ರ ಮತ್ತು ಅವರ ಸಾಮಾಜಿಕ–ಸಾಂಸ್ಕೃತಿಕ ಆಚರಣೆಗಳ ಬಗ್ಗೆ ವಿವರಿಸಲಾಗಿದೆ.*

***ಮುಖ್ಯಪದಗಳು (Keywords)*:** ಆಯಗಾರಿಕೆ, ಕೃಷಿ, ಗ್ರಾಮೀಣ ಬದುಕು, ನೀರಗಂಟಿ, ಸಾಮಾಜಿಕ ವ್ಯವಸ್ಥೆ.

**ಪೀಠಿಕೆ**

ಉದ್ಯೋಗ ಎನ್ನುವುದು ಕೇವಲ ಕೆಲಸವಲ್ಲ. ಅದು ಜೀವನ ಪ್ರೀತಿಯನ್ನು ಕಲಿಸಿಕೊಡುವುದಾಗಿತ್ತು. ಊರಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಗ್ರಾಮೀಣರು ರೂಪಿಸಿಕೊಂಡಿರುವ ಸಾಮಾಜಿಕ ವ್ಯವಸ್ಥೆಯಲ್ಲಿ ನೀರಗಂಟಿಗೆ ಮಹತ್ವದ ಪಾತ್ರವಿದೆ. ಕೆರೆ ಮತ್ತು ಅದರಲ್ಲಿನ ನೀರಿನ ನಿರ್ವಾಹಣೆ ಅವರಿಗೆ ಸೇರಿದ್ದು. ಕೆರೆ ಏರಿಯಲ್ಲಿ ಸಮಸ್ಯೆ ಕಾಣಿಸಿಕೊಂಡರೆ, ನೀರಗಂಟಿ ಜೀವದ ಹಂಗನ್ನು ತೊರೆದು ಕೆರೆಗಿಳಿಯುತ್ತಾನೆ; ಏರಿಯನ್ನು ಬಲಪಡಿಸುತ್ತಾನೆ. ನೀರನ್ನು ರೈತರಿಗೆ ಸಮಾನವಾಗಿ ಹಂಚುವ ಕೆಲಸವೂ ಆತನದ್ದೇ ಆಗಿದೆ. ಕೌಟಿಲ್ಯನು ತನ್ನ ಅರ್ಥಶಾಸ್ತ್ರದಲ್ಲಿ ಹೇಳಿರುವಂತೆ **"**ಕೆರೆಯು ಸಮಾಜದ ಸ್ವತ್ತು ಅದರ ನೀರು ಸರ್ವರಿಗೂ ಸೂಕ್ತ ಪ್ರಮಾಣದಲ್ಲಿ ಉಪಯೋಗವಾಗಬೇಕು ಯಾರೊಬ್ಬರು ಅದನ್ನು ಕದ್ದು ಪಡೆದು ಕೊಳ್ಳುವುದು ಅಪರಾದವಾಗಿತ್ತು ಅದಕ್ಕಾಗಿ ಕೆರೆಯ ತೂಬಿನಿಂದ ಅಲ್ಲದೆ ಬೇರೆ ಎಲ್ಲಿಂದಾದರು ಕೆರೆಯ ನೀರನ್ನು ಆಚೆಗೆ ಬಿಟ್ಟರೆ ಅಂತ ವ್ಯಕ್ತಿಗಳು 6 ಪಣ ದಂಡ ತೆರಬೇಕಾಗಿತ್ತು ಕೆರೆಯ ತೂಬಿನಿಂದ ಹರಿಯುವ ನೀರಿಗೆ ಗೊತ್ತು ಗುರಿಯಿಲ್ಲದೆ ಅಡ್ಡಿ ಮಾಡುವವರೂ ಅಷ್ಟೇ ಪ್ರಮಾಣದ ದಂಡ ತೆರಬೇಕು ಎಂದು ಹೇಳುತ್ತಾನೆ**"**.

*Please cite this article as: ರಮ್ಯ ಎನ್. ಆರ್. (2021*). ಕೆರೆ ನಿರ್ವಹಣೆ ಮತ್ತು ಧಾರ್ಮಿಕ ಕಾರ್ಯಗಳಲ್ಲಿ ನೀರಗಂಟಿ ಮನೆತನದ ಪಾತ್ರ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 145–149*

ನೀರಗಂಟಿಯವರು ಹಳ್ಳಿಯಲ್ಲಿ ಬಹಳ ಗೌರವ ಮತ್ತು ಪ್ರಾಮುಖ್ಯತೆಯ ಸ್ಥಾನವನ್ನು ಪಡೆದಿದ್ದಾರೆ. ನೀರಗಂಟಿಯವರು ನೀರಿನ ಕೇಂದ್ರವೆಂದು ಪರಿಗಣಿಸಲಾಗಿತ್ತು. ಅವರು ಸಾಮಾನ್ಯವಾಗಿ ಅನಕ್ಷರಸ್ಥರು ಇನ್ನು ತಮ್ಮ ನೀರಿನ ನಿರ್ವಹಣೆಯಲ್ಲಿ ಜ್ಞಾನ ಮತ್ತು ಕೌಶಲ್ಯ ನಿಜಕ್ಕೂ ಅದ್ಭುತವಾಗಿದೆ. ಇದು ಹೆಚ್ಚು ಈ ವಿಧಾನಗಳು ನೀರನ್ನು ನ್ಯಾಯಯುತವಾಗಿ ಮತ್ತು ಸಮಾನ ರೀತಿಯಲ್ಲಿ ಒದಗಿಸುವುದು ಗಮನಾರ್ಹ ಸಂಗತಿಯಾಗಿದೆ.

ಕೆರೆಗಳನ್ನು ನಿರ್ಮಿಸುವಾಗ ತೂಬುಗಳ ಸಹಾಯದಿಂದ ನಿರ್ಮಿಸಲಾಗಿತ್ತು. ಕೆರೆಗಳು ಚಿಕ್ಕದಾಗಿದ್ದು ತೂಬುಗಳು ಹಾನಿಗಿಡಾಗುತಿದ್ದವು. ಹೀಗಾಗಿ ಕಾಲ ಕಾಲಕ್ಕೆ ಅವುಗಳ ದುರಸ್ಥಿಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗುತಿತ್ತು. ತೂಬುಗಳು ಕೆರೆಯ ಮಧ್ಯದಲ್ಲಿರುತ್ತಿದ್ದುರಿಂದ ನೀರಗಂಟಿಗಳು ನೀರು ಹರಿಸುವಾಗ ಮತ್ತು ನಿಲ್ಲಿಸುವಾಗ ಕೆರೆಯ ದಡದಿಂದ ತೂಬಿನವರೆಗೆ ಈಜಿ ಆನಂತರ ಮುಚ್ಚಳವನ್ನು ತೆಗೆಯುವ ಮತ್ತು ಹಾಕುವ ಮೂಲಕ ನೀರಿನ ಹರಿವನ್ನು ನಿಯಂತ್ರಿಸುತ್ತಿದ್ದರು ಕೆರೆಯಲ್ಲಿ ಸಂಗ್ರಹಿಸಿದ ನೀರನ್ನು ಫಲಾನುಭವಿಗಳಿಗೆ ಸೂಕ್ತ ಪ್ರಮಾಣದಲ್ಲಿ ಹಾಗೂ ಸೂಕ್ತ ಸಮಯದಲ್ಲಿ ವಿತರಣೆ ಮಾಡುವುದು ನೀರಗಂಟಿಯ ಕರ್ತವ್ಯ. ಇದರೊಂದಿಗೆ ನೀರಗಂಟಿಯ ಪ್ರಮುಖ ಕಾರ್ಯವೆಂದರೆ ಕೆರೆಯಲ್ಲಿರುವ ನೀರನ್ನು ಪೋಲಾಗದಂತೆ ಕಾಪಾಡುವುದು, ನೀರು ಕಳುವಾಗದಂತೆ ನೋಡಿಕೊಳ್ಳುವುದು ಹಾಗೂ ಕೆರೆಗೆ ನೀರಿನ ಒಳಹರಿಯುವ ಹೆಚ್ಚಿನ ಪ್ರಮಾಣದಲ್ಲಿ ಬರುವಂತೆ ನೋಡಿಕೊಳ್ಳುವುದಾಗಿತ್ತು. ಒಂದು ವೇಳೆ ತೊಂದರೆಯಾದರೆ ಕೆರೆಯ ಉಸ್ತುವಾರಿ ಸಮಿತಿಗೆ ತಿಳಿಸಬೇಕಿತ್ತು. ಹಾಗಾಗಿ ಗ್ರಾಮಾಡಳಿತ ವ್ಯವಸ್ಥೆಯಲ್ಲಿ ಹಿಂದೆ ಗೌಡ, ಶಾನುಬೋಗ, ತೋಟಿ, ತಳವಾರರು ಎಷ್ಟು ಪ್ರಮುಖರೋ ನೀರಗಂಟಿಗಳಿಗೂ ಅಷ್ಟೇ ಪ್ರಮುಖ ಸ್ಥಾನವಿತ್ತು.

ಬಿ.ಎಲ್ ರೈಸ್ ಅವರು **"**ಈ ನೀರಗಂಟಿಯು ತಾನು ನಿರ್ವಹಿಸಿದ ಕಾರ್ಯಕ್ಕೆ ಪ್ರತಿಫಲವಾಗಿ ಹೊರೆ ಹುಲ್ಲು ಹಾಗೂ ಮೂರಾಭತ್ತವನ್ನು ಪಡೆಯುತಿದ್ದನೆಂದು ಹೇಳುತ್ತಾರೆ**"** ಇಲ್ಲಿ ಹೊರೆ ಹುಲ್ಲು ಎಂದರೆ ಒಂದು ಅಥವಾ ಹೆಚ್ಚಿನ ಹುಲ್ಲಿನ ಕಂತೆಗಳು ಮೂರಾ ಭತ್ತ ಎಂದರೆ ಭತ್ತದಲ್ಲಿ ಒಂದು ಪಾಲು ಎಂದು ತೋರುತ್ತದೆ. ಅಂದು ಜಾರಿಯಲ್ಲಿದ್ದ ಈ ನೀರಗಂಟಿ ವ್ಯವಸ್ಥೆಯು ಇಂದಿಗೂ ಮುಂದುವದುಕೊಂಡು ಬಂದಿದೆ. ನೀರಗಂಟಿ ಕೆಲಸವು ಪರಂಪರಾಗತವಾದುದ್ದಾಗಿದ್ದು. ಒಂದೇ ಕುಟುಂಬದವರು ನಿರ್ವಹಿಸುವುದು ಪದ್ದತಿ. ಸಾಮಾಜಿಕವಾಗಿ ನೋಡುವುದಾದರೆ ಪರಿಶಿಷ್ಟಜಾತಿ ಮತ್ತು ಪಂಗಡದವರೆ ನೀರಗಂಟಿಗಳಾಗಿರುತ್ತಾರೆ. ಸಾಮಾನ್ಯವಾಗಿ ನೀರಗಂಟಿಗಳು ಭೂ ರಹಿತರು ಅಥವ ಅತಿಸಣ್ಣ ಹಿಡುವಳಿದಾರರಾಗಿರುತ್ತಾರೆ. ಹಾಗಾಗಿ ಇವರ ಕೆಲಸಕ್ಕೆ ಪ್ರತಿಯಾಗಿ ಧವಸ ಧಾನ್ಯಗಳನ್ನು ಕೊಡುವುದು ರೂಡಿ, ಎಕರೆಗೆ ಇಷ್ಟು ಸೇರು ಭತ್ತ ಅಥವಾ ಹೊರೆಯನ್ನು ನೀಡುತ್ತಿದ್ದರು ಅಲ್ಲದೆ ಹಳ್ಳಿಗಳಲ್ಲಿ ಮರಿ ಕಡಿದಾಗ ಅಥವ ಬೇಟೆ ಸಿಕ್ಕಾಗ ಅದರ ಒಂದು ಪಾಲು ನೀರಗಂಟಿಗಳಿಗೆ ಕಡ್ಡಾಯವಾಗಿ ಕೊಡಬೇಕು. ಕೆರೆ ಕೋಡಿ ಬಿದ್ದಾಗ ಪೂಜೆ ಮಾಡಿ ಕೊಡುವ ಮೊದಲ ಬಲಿಯು ನೀರಗಂಟಿಗಳಿಗೆ ಸೇರುತ್ತದೆ. ಆದರೆ ಇತ್ತೀಚಿನ ದಿನಗಳಲ್ಲಿ ಈ ವ್ಯವಸ್ಥೆ ಬಹುತೇಕ ನಿಂತುಹೋಗಿದೆ. ನೀರಿನ ಅಭಾವ, ಬದಲಾದ ಬೆಳೆ ಪದ್ಧತಿ, ಸಾಮಾಜಿಕ ಪಲ್ಲಟ ಇದಕ್ಕೆ ಕಾರಣವಾಗಿದೆ.

**ಧಾರ್ಮಿಕ ವ್ಯವಸ್ಥೆಯಲ್ಲಿ ನೀರಗಂಟಿ ವಂಶಸ್ಥರ ಪಾತ್ರ**

ಗ್ರಾಮದ ಆರಾಧ್ಯ ದೈವ ಮಾರಮ್ಮ. ವರ್ಷಕ್ಕೆ ಒಂದು ಭಾರಿ ಮಾರಮ್ಮನ ಹಬ್ಬ ಆಚರಿಸುತ್ತಾರೆ. ಮಾರಮ್ಮನನ್ನು ಆರಾಧಿಸುವುದರಿಂದ ಕಷ್ಟಗಳು ಕಳೆದು ಇಷ್ಟಾರ್ಥಗಳು ಸಿದ್ಧಿಸುವುದೆಂದು ಹಿಂದಿನಿಂದಲೂ ಜನರು ನಂಬಿಕೊಂಡು ಬಂದಿದ್ದಾರೆ. ಮಾರಮ್ಮನ ಜಾತ್ರೆಯನ್ನು "ಅಮ್ಮ ಜಾತ್ರೆ" ಎಂದು ಕರೆಯುತ್ತಾರೆ. ನೀರಗಂಟಿ ವಂಶಸ್ಥರು ಮಾರಮ್ಮನ ಪೂಜಾ ಕಾರ್ಯದಲ್ಲಿ ತೊಡಗಿರುತ್ತಾರೆ  ಹಾಗೆಯೇ ಐದು ವರ್ಷಕ್ಕೊಮ್ಮೆ ದೊಡ್ಡ ಮಾರಿಕಾಂಬ ಜಾತ್ರೆ ಆರುದಿನಗಳ ಕಾಲ ನಡೆಯುತ್ತದೆ. ಈ ಹಬ್ಬದಲ್ಲಿ ನೀರಗಂಟಿಯವರ ಪಾತ್ರ ಹೆಚ್ಚಿನದಾಗಿರುತ್ತದೆ. ಇದರಲ್ಲಿ ಯಾವುದಾದರು ಬಲಿಕೊಡುವಾಗ ಅಥವಾ ಪೂಜೆ ನಡೆಸುವಾಗ ಊರಿನ ಜನರೆಲ್ಲರೂ ನೀಡಿದ ಧವಸ ಧಾನ್ಯ ಮತ್ತು ಜಾತ್ರೆ ಸಮಯದಲ್ಲಿ ನಡೆಯುವ ಬಲಿ ಪೂಜೆಯೂ ಸಹ ನೀರಗಂಟಿ ಜವಬ್ದಾರಿಯಾಗಿರುತ್ತದೆ. ಇಲ್ಲಿ ಸಂಗ್ರಹವಾಗುವ ಧವಸ ಧಾನ್ಯ ನೀರಗಂಟಿ ಸಹಿತ 12 ಜನ ಆಯಾಗಾರರಿಗೂ ಸಮನಾಗಿ  ಹಂಚಿಕೆಯಾಗುತ್ತದೆ.

ಜಾತ್ರೆ ನಡೆಯುವ 2ನೇ ದಿನದಲ್ಲಿ ಬಲಿ ಕೊಡುವ ಕುರಿಯನ್ನು 'ಬಾನ್ ಕುರಿ' ಎಂದು ಕರೆಯುತ್ತಾರೆ. ಈ ಬಾನ್ ಕುರಿಯ ಭಾಗವನ್ನು ನೀರಗಂಟಿ ವಂಶಸ್ಥರಿಗೆ ಮಾತ್ರ ಕೊಡುವ ಪದ್ಧತಿ ಹಿಂದಿನಿಂದಲೂ ರೂಢಿಯಲ್ಲಿದೆ. ಹಾಗೆಯೇ 5ನೇ ದಿನದಲ್ಲಿ ನಡೆಯುವ ಗಾವು ಸಿಗಿಯುವ ಆಚರಣೆಯಲ್ಲಿ  ನೀರಗಂಟಿ ವಂಶಸ್ಥರ ಹಿರಿಯರ ಮನೆಯಲ್ಲಿ ಪೂಜಾ ಕಾರ್ಯ ನಡೆಯುತ್ತದೆ. ಆ ಮನೆಗೆ ಬರುವ ಪೋತರಾಜರು ಉಪವಾಸದಿಂದ, ಮಡಿಯಿಂದ ಪೂಜೆಯಲ್ಲಿ ತೊಡಗುತ್ತಾರೆ. ನಂತರ ನೀರಗಂಟಿ ವಂಶಸ್ಥರ ಹಿರಿಯ ಮಗನಿಂದ ಗಂಗಾದೇವಿಯ ಪೂಜೆ ನಡೆಯುತ್ತದೆ. ಪೋತರಾಜರು ಉರುಮೆ, ತಮಟೆ ವಾದ್ಯಗಳ ಸಮೇತ ಗಂಗೆ ಪೂಜೆಗೆ ಹೋಗುತ್ತಾರೆ ಊರಿನ ಜನರು ಈ ಗಂಗಾ ಪೂಜೆಯಲ್ಲಿ ಭಾಗವಹಿಸುತ್ತಾರೆ. ಅದರಲ್ಲಿ ಮುಖ್ಯವಾಗಿ ಈ ನೀರಗಂಟಿ ವಂಶಸ್ಥರ ಹೆಣ್ಣುಮಕ್ಕಳು ಪೂಜಾ ಕಾರ್ಯಕ್ರಮವನ್ನು ನಿರ್ವಹಿಸುತ್ತಾರೆ ಹಾಗೇ ಈ ವಂಶಸ್ಥರ ಮಗ ಮತ್ತು ಹೆಣ್ಣುಮಕ್ಕಳು ತಲೆ ಮೇಲೆ ನೀರಿನ ಬಿಂದಿಗೆಯನ್ನು ಒತ್ತು ದೇವಸ್ಥಾನಕ್ಕೆ ತರಬೇಕು ಇದು ಹಿಂದಿನ ಕಾಲದಿಂದಲೂ ನಡೆದುಬಂದ ಸಂಪ್ರದಾಯವಾಗಿದೆ ಪೋತರಾಜರು ಮೈ ಎಲ್ಲಾ ಅರಿಸಿಣ ಕುಂಕುಮ ಮತ್ತು ವಿಭೂತಿಯನ್ನು ಹಂಚಿಕೊಂಡು ಚಾಟಿಯಲ್ಲಿ ಹೊಡೆದುಕೊಂಡು ದೇವಸ್ಥಾನಕ್ಕೆ ಬರುತ್ತಾರೆ.  ಅಮ್ಮನ ಅಪ್ಪಣೆಯನ್ನು ಪಡೆದು ಪೋತರಾಜರು ಕಪ್ಪು ಬಣ್ಣದ ಗಂಡು ಮೇಕೆ ಮರಿಯೊಂದನ್ನು (ಕರಿ ಹೋತ) ತರುತ್ತಾರೆ ಆಗ ಪೋತರಾಜನೊಬ್ಬ ತನ್ನ ಹಲ್ಲುಗಳಿಂದ ಕಚ್ಚಿ ದೇವರಿಗೆ ಬಲಿರೂಪದಲ್ಲಿ ಅರ್ಪಿಸುತ್ತಾರೆ. ಗಾವು ಸಿಗಿಯುವ ದಿನವನ್ನು ನಿರ್ದಿಷ್ಟಗೊಳಿಸಿದ ದಿನದಿಂದಲೇ ಪೋತರಾಜರು ನೀರು ಹಾಲು ಹಣ್ಣನ್ನು ಹೊರತು ಪಡಿಸಿ ಮತ್ತೇನನ್ನು ಸೇವಿಸದೇ ಉಪವಾಸವಿರುತ್ತಾರೆ. ಗಾವು ಮುಗಿದ ನಂತರ ಸಂಭಾವನೆ ಪಡೆದಕೊಳ್ಳುತ್ತಾರೆ. ಇದು ಜಾತ್ರೆಯಲ್ಲಿ ಒಂದು ಆಚರಣೆಯಾಗಿ ಉಳಿದುಕೊಂಡು ಬಂದಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಸಮಕಾಲೀನ ಸಂದರ್ಭದಲ್ಲಿ ನೀರಗಂಟಿಗಳ ಬದುಕು ಕಳೆ ಗುಂದಿದೆ. ಸಾಮೂಹಿಕ ಸಂಪತ್ತಾಗಿದ್ದ ಕೆರೆ ನಿರ್ವಹಣೆಯ ಜ್ಞಾನಬಪರಂಪರೆಯ ಕೊಂಡಿಯೂ ಹಿರಿಯ

ನೀರಗಂಟಿಗಳ ಸಾವಿನೊಂದಿಗೆ ಕಳಚುತ್ತಿದೆ. ಕೆರೆ ನೀರನ್ನು ರಕ್ಷಿಸಲು ಅವರ ಜಾಣ್ಮೆ ಸಾಮರ್ಥ್ಯವೂ ಇಂದಿನ ದಿನಗಳಲ್ಲಿ ಕಣ್ಮರೆಯಾಗಿದೆ. ಸರ್ಕಾರ 1962ರಲ್ಲಿ ಕೆರೆಗಳನ್ನು ಸರ್ಕಾರದ ಆಸ್ತಿಯಾಗಿ ಸ್ವಾಧೀನ ಪಡಿಸಿಕೊಂಡಾಗ ನೀರಗಂಟಿಯವರ ಪಾತ್ರವೂ ಕಡಿಮೆಯಾಗತೊಡಗಿತು. ನೀರಗಂಟಿ ಕೆಲಸ ನಿರ್ವಹಿಸುತ್ತಿದ್ದ ಹಿರಿಯರಿಗೆ ಸರ್ಕಾರವು ಪಿಂಚಣಿ ಹಣವನ್ನು ಘೋಷಿಸಿದ ನಂತರ ಹಿಂದಿನ ವ್ಯವಸ್ಥೆಯಲ್ಲಿಯೇ ನಿಂತುಹೋಗಿದೆ ಎಂದು ತಿಳಿದುಬರುತ್ತದೆ. ಇವರು ಆರ್ಥಿಕವಾಗಿ ಬಲಾಢ್ಯರಾಗಿಲ್ಲದಿದ್ದರೂ ಪ್ರಜೆಗಳ ದೃಷ್ಟಿಯಲ್ಲಿ ನೀರಗಂಟಿ ಎಂದು ಕರೆಸಿಕೊಳ್ಳುವುದು ಅಭಿಮಾನದ ಸಂಕೇತವಾಗಿದೆ. ಹೊಸ ರಾಜಕೀಯ ಕ್ರಮದಲ್ಲಿ ಅವರಿಗೆ ಯಾವುದೇ ಮಾನ್ಯತೆ ಇಲ್ಲವಾದರೂ; ಧಾರ್ಮಿಕ ವ್ಯವಸ್ಥೆಯಲ್ಲಿ ಸಿಗುವಂತ ಹಕ್ಕು ಬಾಧ್ಯತೆಗಳನ್ನು ನೀರಗಂಟಿಯವರು ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿದ್ದಾರೆ. ಇಂದು ಹೆಸರಿಗಷ್ಟೇ ನೀರಗಂಟಿ ಎಂಬ ಪದ ಬಳಕೆಯಲ್ಲಿರುವುದನ್ನು ಕಾಣುತ್ತೇವೆ.

**ಪರಾಮರ್ಶನ ಗ್ರಂಥಗಳು**


- ಕಸ್ತೂರಿ ನೀಲತ್ತಹಳ್ಳಿ. (ಅನು.) (2000). ಕರ್ನಾಟಕದಲ್ಲಿ ಕೆರೆ ನೀರಾವರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಧೃವ ನಾರಾಯಣ ಎಂ. (ಅನು.) (2001). ವಿಜಯನಗರ ಸಾಮ್ರಾಜ್ಯದ ನೀರಾವರಿ ವ್ಯವಸ್ಥೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಬಸವರಾಜ ಚವಡಿ. (2007). ಕಲ್ಯಾಣದ ಚಾಲುಕ್ಯರ ಕಾಲದ ಕೃಷಿ ಪದ್ದತಿ. ಅಪ್ರಕಟಿತ ಪ್ರೌಢಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪು.143
- ಮಂಜುಳ.ಸಿ.ಎನ್. (2013). ದಕ್ಷಿಣ ಕರ್ನಾಟಕದಲ್ಲಿ ಕೆರೆಕಟ್ಟೆಗಳ ನಿರ್ಮಾಣ ಮತ್ತು ನಿರ್ವಹಣೆ (ಆರಂಭದಿಂದ ವಿಜಯನಗರ ಸಾಮ್ರಾಜ್ಯದ ಅಂತ್ಯದವರೆಗೆ). ಅಪ್ರಕಟಿತ ಪ್ರೌಢಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು. ಪು.220
- ವಿಠ್ಠಲ ಎಸ್ ಬಡಿಗೇರ. (2002). ಹೊಯ್ಸಳರ ಕಾಲದ ನೀರಾವರಿ ಪದ್ಧತಿ (1000–1346). ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಪು.174–194.
- ವೀರೇಶ ಬಡಿಗೇರ, 2020 ಕರ್ನಾಟಕ ಆಯಗಾರರ ಸಂಸ್ಕೃತಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.
- ಸಂತೋಷ್ ಎನ್.ಜಿ (2009). ದಾವಣಗೆರೆ ಜಿಲ್ಲೆಯಲ್ಲಿ ವಿಜಯನಗರ ಮತ್ತು ನಾಯಕರ ಕೃಷಿ ವ್ಯವಸ್ಥೆ. (1336–1800). ಅಪ್ರಕಟಿತ ಪೌಢಪ್ರಬಂಧ, ಕುವೆಂಪು ವಿಶ್ವವಿದ್ಯಾಲಯ. ಶಂಕರಘಟ್ಟ.
- ಹೆಗಡೆ–ರಾಜಾರಾಮ್ (ಸಂ.) (2002). ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

## ಅನುಬಂಧ–1 ಛಾಯಾಚಿತ್ರಗಳು



ಜಾತ್ರೆಯ ಸಂದರ್ಭದಲ್ಲಿ ಮಾರಿಕಾಂಭ ದೇವಸ್ಥಾನದ ವಿಹಂಗಮ ನೋಟ



ನೀರಗಂಟಿ ಮನೆತನದ ಮಹಿಳೆಯರು ಗಂಗಾ ಪೂಜೆಯಲ್ಲಿ ತೊಡಗಿರುವುದು



ನೀರಗಂಟಿ ಮನೆತನದ ಹಿರಿಯ ವಾರಸುದಾರ ಗಂಗೆಯನ್ನು ಹೊತ್ತು ತರುತ್ತಿರುವುದು